OS No.140/2022
**PW-2**



**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ**

**ದಿನಾಂಕ 25.03.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.**

**ಪಾಟೀ ಸವಾಲುಃ** ಪ್ರತಿವಾದಿ ಪರ ABH ವಕೀಲರಿಂದ

ನನಗೆ ಓದಲು ಬರೆಯಲು ಬರುವುದಿಲ್ಲ. ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ಗೊತ್ತು. ಈ ದಾವೆಯನ್ನು ದಂಡೆಪ್ಪ ದಾಖಲು ಮಾಡಿರುತ್ತಾನೆ. ಈ ದಾವೆಯನ್ನು ಕೊತ್ತದೊಡ್ಡಿ ಹನುಮಪ್ಪನ ವಿರುದ್ದ ದಾಖಲು ಮಾಡಿರುತ್ತಾರೆ. ಜಮೀನು ಕುರಿತು ದಾವೆ ಮಾಡಿರುತ್ತಾರೆ. ದಾವ ಜಮೀನು ಸ.ನಂ.120 ಇದ್ದು ಜೋಳದಡಗಿ ಗ್ರಾಮದಲ್ಲಿ ಇರುತ್ತದೆ. ಕೊತ್ತದೊಡ್ಡಿ ಹನಮಂತನ ಕುಟುಂಬದ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಬಾಲಪ್ಪನ ತಂದೆ ಹೆಸರು ಸಾಬಯ್ಯ ಇರುತ್ತದೆ. ಸಾಬಯ್ಯನಿಗೆ 4 ಜನ ಮಕ್ಕಳು ಅವರುಗಳು ಯಲ್ಲಮ್ಮ, ಯಂಕಮ್ಮ, ಹನುಮಪ್ಪ ಮತ್ತು ಬಾಲಪ್ಪ ಇರುತ್ತಾರೆ. ಸಾಬಯ್ಯ ಅಂದಾಜು 50 ವರ್ಷಗಳ ಹಿಂದೆ ಮೃತಪಟ್ಟಿರುತ್ತಾನೆ. ಹನುಮಪ್ಪ ಮೃತಪಟ್ಟು 5-6 ವರ್ಷ ಆಗಿರಬಹುದು. ಯಲ್ಲಮ್ಮ ಮತ್ತು ಯಂಕಮ್ಮ ಮೃತಪಟ್ಟಿರುತ್ತಾರೆ. ದಾವ ಜಮೀನು ಪೂರ್ವಕ್ಕೆ ಪಿಂಜಾರರ ಜಮೀನು, ಪಶ್ಚಿಮಕ್ಕೆ ಯಾರ ಜಮೀನು ಇದೆ ನನಗೆ ಗೊತ್ತಿಲ್ಲ, ಉತ್ತರಕ್ಕೆ ಹನುಮಪ್ಪನ ಜಮೀನು ಮತ್ತು ದಕ್ಷಿಣಕ್ಕೆ ಜೋಳದಡಗಿ ಗೌಡಪ್ಪ ಇವರ ಜಮೀನು ಇರುತ್ತದೆ. ನನ್ನ ಪ್ರಮಾಣ ಪತ್ರದಲ್ಲಿ ಚಕ್ಕಬಂದಿಯನ್ನು ಹೇಳಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ ಚಕ್ಕಬಂದಿಯನ್ನು ಬರೆಸಿಲ್ಲ ಎಂದರೆ ನಾನು ಹೇಳಿರುತ್ತೇನೆ ಬರೆದ ಬಗ್ಗೆ ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಮುಂದವರೆದ ಪಾಟೀ ಸವಾಲಿಗೆ ಕಾಲವಕಾವನ್ನು ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.